ದಿನಾಂಕಃ 08.02.2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆಚ್ ಎ ಟಿ ವಕೀಲರಿಂದಃ **1** ರಿಂದ **5** ನೇ ಆರೋಪಿತರ ಪರವಾಗಿಃ

7. ದಿನಾಂಕಃ 30-10-2015 ರಂದು ಚಿಕ್ಕಮಗಳೂರಿನ ಪೊಲೀಸ್ ಅಧೀಕ್ಷಕರು ಎನ್ ಆರ್ ಪುರ ವೃತ್ತ ನಿರೀಕ್ಷಕರು ರಜೆಯಲ್ಲಿದ್ದ ಕಾರಣ ಎನ್ ಆರ್ ಪುರ ಪೊಲೀಸ್ ಠಾಣೆಯ ಮೊಕದ್ದಮೆ ಸಂಃ 135/2015 ರ ತನಿಖೆಯನ್ನು ನಡೆಸಲು ಮೌಖಿಕವಾಗಿ ಸೂಚಿಸಿದ್ದಾಗಿ ಹೇಳಿದ್ದೀರಿ ನೀವು ನಂತರದಲ್ಲಿ ಆ ಬಗ್ಗೆ ಸದರಿಯವರಿಂದ ಲಿಖಿತ ಆದೇಶವನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಎನ್.ಆರ್.ಪುರ ಪೊಲೀಸ್ ಠಾಣೆಯ ಮೊಕದ್ದಮೆ ಸಂಃ 135/2015 ಕ್ಕೆ ಸಂಬಂಧಿಸಿದಂತೆ ತನಿಖೆ ಕೈಗೊಳ್ಳಲು ನಿಮಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ

ಸರಿಯಲ್ಲ.

8. ದಿನಾಂಕಃ 30-10-2015 ರಂದು ಬಾಳೇ ಗ್ರಾಮದ ಮತ್ತಿಮರದಲ್ಲಿದ್ದ ಫ್ರಾಸಾ.1 ರವರ ಮನೆಗೆ ಭೇಟಿ ನೀಡಿದ್ದಾಗಿ, ಅಲ್ಲಿಗೆ ಫ್ರಾಸಾ.2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ ಹೇಳಿದ್ದೀರಿ ಅವರಿಗೆ ನೋಟೀಸನ್ನು ಜಾರಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸ್ಥಳದಲ್ಲಿ ಕತ್ತಿ ಬಿದ್ದಿದ್ದಾಗಿ ಹೇಳಿದ್ದೀರಿ ಅದನ್ನು ಬೆರಳಚ್ಚು ತಜ್ಞರಿಗೆ ಕಳುಹಿಸಿ ಅದರ ಮೇಲೆ ಯಾರದ್ದಾದರೂ ಬೆರಳಿನ ಗುರುತುಗಳು ಕಂಡು ಬಂದವೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆಗ್ಗೆ ಘಟನೆ ಸಂಭವಿಸಿ 24 ಗಂಟೆಗಳು ಕಳೆದು ಹೋಗಿದ್ದರಿಂದ ಯಾವುದೇ ಕುರುಹುಗಳು ಸಿಗುವುದಿಲ್ಲವೆಂದು ಕಳುಹಿಸಿಲ್ಲ ಎನ್ನುತ್ತಾರೆ.

9. ಗಾಯಾಳುವಿನ ರಕ್ತದ ಗುಂಪಿನ ಬಗ್ಗೆ ತಜ್ಞರಿಂದ ಅಥವಾ ವೈದ್ಯರಿಂದ ವರದಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತನಿಖಾ ಕಾಲದಲ್ಲಿ ಪಡೆದುಕೊಂಡಿಲ್ಲ ಎನ್ನುತ್ತಾರೆ. ದಿನಾಂಕಃ 30-10-2015 ರಂದು ಬಾಳೇ ಗ್ರಾಮದ ಮತ್ತಿಮರದಲ್ಲಿದ್ದ ಫ್ರಾಸಾ.1 ರವರ ಮನೆಗೆ ಭೇಟಿ ನೀಡಿದ್ದಾಗಿ, ಅಲ್ಲಿಗೆ ಫ್ರಾಸಾ.2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ, ಅಲ್ಲಿ ಫ್ರಾಸಾ.1 ರವರು ಸ್ಥಳವನ್ನು ತೋರಿಸಿದ್ದಾಗಿ, ಅಲ್ಲಿ ನೀವು ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ, ಮು.ಮಾ.1 ಕತ್ತಿಯನ್ನು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ನಿಪಿ.3 ರಂತೆ ಫೋಟೋವನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ಪಂಚನಾಮೆಯ ಕಾಲಕ್ಕೆ ಫ್ರಾಸಾ.1 ರವರು ಅಪರಿಚಿತ ವ್ಯಕ್ತಿಗಳು ತಮ್ಮ ಮನೆಯಲ್ಲಿದ್ದ ಒಂದು ಕಲರ್ ಟಿ.ವಿ. ಮತ್ತು ಒಂದು

ಕಂಪ್ಯೂಟರ್ ನ್ನು ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದ್ದಾಗಿ ಹೇಳಿದ್ದೀರಿ ನಿಮ್ಮ ತನಿಖಾ ಕಾಲದಲ್ಲಿ ಸದರಿ ಟಿ.ವಿ ಮತ್ತು ಕಂಪ್ಯೂಟರನ್ನು ಫ್ರಾಸಾ.1 ರವರು ಖರೀದಿಸಿದ್ದ ಬಗ್ಗೆ ರಶೀದಿಯನ್ನು ಪಡೆದುಕೊಂಡು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

11. ಘಟನೆ ನಡೆದಿದೆ ಎನ್ನಲಾದ ಸ್ಥಳದಲ್ಲಿ ನಿಪಿ.40 ರಂತೆ ಕಚ್ಚಾ ನಕ್ಷೆಯನ್ನು ತಯಾರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.  ದಿನಾಂಕಃ 24-08-2016 ರಂದು ಎನ್.ಆರ್.ಪುರ ಸರ್ಕಾರಿ ಆಸ್ಪತ್ರೆಯ ವೈಧ್ಯರಿಗೆ ಎಫ್ ಎಸ್ ಎಲ್ ನಿಂದ ಬಂದಂತಹ ಕತ್ತಿಯನ್ನು ಪರೀಕ್ಷಿಸಿ ವೈಧ್ಯರು ನೀಡಿದ್ದ ಫ್ರಾಸಾ.1 ರವರ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದ್ದ ಗಾಯಗಳು ಸದರಿ ಕತ್ತಿಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ  ಇದೆಯೇ ಎಂದು ಅಭಿಪ್ರಾಯವನ್ನು ತಿಳಿಸಲು ನಿಪಿ.42 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.  ಸದರಿ ಮನವಿಯ ಮೇರೆಗೆ ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ದಿನಾಂಕಃ 25-08-2016 ರಂದು ನಿಪಿ.43 ರಂತೆ ದೃಢೀಕರಣ ಪತ್ರವನ್ನು ನೀಡಿದ್ದು ಅದನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ನಿಪಿ.44 ರಂತೆ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.  ತನಿಖೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷಧಾರಗಳು ಕಂಡುಬರದೇ ಇದ್ದರೂ ಸಹ ಅವರ

ವಿರುದ್ಧ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 6 ನೇ ಆರೋಪಿ ಪರವಾಗಿ ಶ್ರೀ ಐ ಎಸ್ ಟಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ